ಹೊಂದಾಣಿಕೆಯೂ ನಮಗೆ ಕಾಣಿಸುತ್ತಿಲ್ಲ. ಸಮುದಾಯದ ಹಲವು ಶ್ರೀಮಠಗಳನ್ನು ಸಂಪರ್ಕಿಸಿ ನಿಮ್ಮ ಹೆಸರಿನ ಕುರಿತು ಇರಬಹುದಾದ ಗೋಜಲನ್ನು ಸ್ಪಷ್ಟಪಡಿಸಿಕೊಳ್ಳಲು ಸಂದರ್ಶನ ಸಮಿತಿಯು ಪ್ರಯತ್ನಿಸಿತು. ಸಮುದಾಯದ ರೀತಿರಿವಾಜುಗಳನ್ನು ಅಭಿವ್ಯಕ್ತಿಸುವ ಹೆಸರು ನಿಮ್ಮದಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುವ ಮಠಗಳ ಯತಿಗಳು ತಮ್ಮ ಜಾತಿಯನ್ನು ದುರುಪಯೋಗ ಪಡಿಸಿಕೊಂಡಿದ್ದಕ್ಕೆ ಪ್ರತಿಯಾಗಿ ನಿಮ್ಮ ಮೇಲೇಕೆ ದಾವೆ ಹೂಡಬಾರದೆಂದು ನಮ್ಮನ್ನು ಪ್ರಶ್ನಿಸಿದ್ದಾರೆ. ಕಳೆದ ಇಪ್ಪತ್ತೈದು ವರ್ಷಗಳಿಂದ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿರುವ ನಿಮ್ಮನ್ನು ಇದ್ದಕ್ಕಿದ್ದಂತೆ ನೌಕರಿಯಿಂದ ವಜಾಗೊಳಿಸಲು ಆಡಳಿತ ಮಂಡಳಿಗೂ ಇಚ್ಛೆಯಿಲ್ಲ. ಹಾಗೆಂದು ಮಂಡಳಿಯ ನಿಯಮಗಳಿಗೆ ವಿರುದ್ಧವಾಗಿ ನಿಮ್ಮನ್ನು ಕೆಲಸದಲ್ಲಿ ಮುಂದುವರೆಸುವಂತೆಯೂ ಇಲ್ಲ. ಹದಿನೈದು ದಿನಗಳ ಕಾಲಾವಕಾಶವನ್ನು ನಿಮಗೆ ನೀಡಲಾಗಿದೆ. ಈ ಹದಿನೈದು ದಿನಗಳಲ್ಲಿ ನೀವು ಅರ್ಜಿಯಲ್ಲಿ ನಮೂದಿಸಿರುವ ಸಮುದಾಯಕ್ಕೆ ಸೇರಿದವರೆಂದು ರುಜುವಾತು ಪಡಿಸಬೇಕು ಮತ್ತು ಕಂಪನಿಯ ನೀತಿ ನಿಯಮಗಳು ನಿಮ್ಮ ಮುಖದ ಚಹರೆಯಲ್ಲಿ ಪ್ರತಿಬಿಂಬಿಸಬೇಕು. ಹಾಗೊಂದು ವೇಳೆ ಮೇಲೆ ಉಲ್ಲೇಖಿಸಿದ ಸಂಗತಿಗಳನ್ನು ನೀವು ಸಾಬೀತು ಪಡಿಸದೆ ಹೋದಲ್ಲಿ ಈ ಪತ್ರವನ್ನೇ ನಿಮ್ಮನ್ನು ನೌಕರಿಯಿಂದ ವಜಾಗೊಳಿಸಿದ ಆದೇಶ ಪತ್ರವೆಂದು ಪರಿಗಣಿಸತಕ್ಕದ್ದು.'

ಆ ರಾತ್ರಿ ಸರಳಾಬಾಯಿಗೆ ಭವಿಷ್ಯ ಅಂಧಕಾರದಲ್ಲಿ ಮುಳುಗಿದಂತಾಗಿ ನಿದ್ದೆ ಹತ್ತಿರ ಸುಳಿಯದೆ, ಮನಸ್ಸು ಒಂದುರೀತಿಯ ಕ್ಷೋಭೆಯಿಂದ ನರಳಿತು. ರಾತ್ರಿಯೆಲ್ಲ ನಿದ್ದೆಗೆಟ್ಟು ಯೋಚಿಸಿದವಳಿಗೆ ಶೇಷಗಿರಿ ಪುರೋಹಿತನನ್ನು ಪ್ರೇಮಚಂದ ಭೇಟಿ ಮಾಡಿದರೆ ಸಮಸ್ಯೆಗೆ ಪರಿಹಾರ ಸಿಗಬಹುದೆಂಬ ಭರವಸೆ ಮನಸ್ಸಿನಲ್ಲಿ ಮೂಡಿದ್ದೆ ಅದನ್ನು ಮರುದಿನ ಬೆಳಗ್ಗೆ ಗಂಡನ ಮನವೊಲಿಸಿ ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾದಳು.

★★★

